**<u>ಹೆಚ್ಚುವರಿ ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಮುಧೋಳ</u>**

**<u>ಸಿಸಿ ನಂ.171/2021</u>**

1) ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು ಮುಧೋಳ ಪೊಲೀಸ ಠಾಣೆ ...ಪಿರ್ಯಾದಿ.

**- ವಿರುದ್ಧ -**

1) ವಿಶ್ವನಾಥ ತಂ.ಚಂದ್ರಶೇಖರ ನಾಯರ,
ವಯಾಃ40, ಸಾಃಬೃಂದಾವನ ನಗರ, ಮತ್ತಿಕೆರೆ, ಬೆಂಗಳೂರು,
ತಾ-ಬೆಂಗಳೂರು.

.....ಆರೋಪಿ

**ಉಪಸ್ಥಿತರುಃ ಶ್ರೀ.ವಿವೇಕ ಗ್ರಾಮೋಪಾಧ್ಯೆ,**
B.S.L. LL.B
ಹೆಚ್ಚುವರಿ, ಹಿರಿಯ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಮುಧೋಳ.

## <u>-: : ದೋಷಾರೋಪಣೆ: :-</u>

ಈ ಪ್ರಕರಣದ ಚಾಸಾ-13 ನಂದಕುಮಾರು ಮತ್ತು ಚಾಸಾ-5 ಸಂದೀಪ ಇವರ ಮುಖಾಂತರ ಪಿರ್ಯಾದಿಯವರಾದ ಅನುಪ ತಂ.ಅಮೃತಲಾಲ ಶಹಾ ರವರು 1 ನೇ ಆರೋಪಿತಯವರಾದ ನಿಮಗೆ ಭೇಟಿಯಾಗಿದ್ದು, ಪಿರ್ಯಾದಿಯು ಮುಧೋಳದಲ್ಲಿ ಪಾಲಿ ಪ್ರಾಪಿಲಿನ ಬ್ಯಾಗ್ ಮ್ಯಾನುಪ್ಯಾಕ್ಚರಿಂಗ್ ಯುನಿಟಗೆ ಸುಮಾರು 20 ಕೋಟಿ ಸಾಲ ಬೇಕಾಗಿದೆ ಎಂದು ತಿಳಿಸಿದ್ದು, ನೀವು ಅವರಿಗೆ 2012 ರಿಂದ ಮೈ ಗ್ಲೋಬಲ್ ಪೈನಾನ್ಸಿಯಲ್ ಸರ್ವಿಸಸ್ ಬೆಂಗಳೂರಿನಲ್ಲಿ ಸಿ.ಈ.ಓ ಆಗಿ ಕೆಲಸ ಮಾಡುತ್ತಿದ್ದು ಅಂತಾ ಪರಿಚಯಿಸಿಕೊಂಡು 20 ಕೋಟಿ ಸಾಲ ಮಂಜೂರು ಮಾಡಿಸಲು ನೀವು ಒಟ್ಟು ಹಣದ 1 ಪ್ರತಿಶತ ಖರ್ಚು ಇದ್ದು, ಮೈ ಗ್ಲೋಬಲ್ ಪೈನಾನಸ್ಸಿಯಲ್ ಸರ್ವಿಸ್‌ಸ ಲಿ. ಇವರ ಹೆಸರಿನಿಂದ ಇರುವ ಖಾತೆ ನಂಬರ ಕೊಡುತ್ತೇನೆ, ಆ ಖಾತೆಗೆ ಹಣ ಜಮಾ ಮಾಡಿ ಅಂತಾ ಹೇಳಿ ನಂಬಿಸಿದ್ದು ಇರುತ್ತದೆ.

ನಂತರ ದಿಃ29.04.2013 ರಂದು ಕರ್ನಾಟಕ ಬ್ಯಾಂಕ ಲಿ. ಕಸ್ತೂರಿ ನಗರ, ಬೆಂಗಳೂರಿನಲ್ಲಿ ಹೊಸದಾಗಿ 2 ನೇ ಆರೋಪಿಯವರ ದಾಖಲೆಗಳನ್ನು ಬಳಿಸಿ ಖಾತೆ ತೆರೆದಿದ್ದು, ಅದರ ಖಾತೆ ನಂ.9202000100003101 ಅಂತಾ ಇದ್ದು, ಸದರಿ ಖಾತೆಗೆ ಪಿರ್ಯಾದಿಯ ಮುಧೋಳದ ಕಾರ್ಪೊರೇಶನ ಬ್ಯಾಂಕ ಶಾಖೆ-ಮುಧೋಳ, ಖಾತೆಯಿಂದ ನಿಮ್ಮ ಬೆಂಗಳೂರಿನ ಖಾತೆಗೆ 2 ಲಕ್ಷ 70 ಸಾವಿರ ಹಣವನ್ನು ಜಮಾ ಮಾಡಿಸಿಕೊಂಡು, ಸದರಿ ಹಣವನ್ನು 1 ಮತ್ತು 2 ನೇ ಆರೋಪಿತರಾದ ನೀವು ವಿತಡ್ರಾವಲ್ ಮಾಡಿಕೊಂಡಿದ್ದು ಇರುತ್ತದೆ.

ನಂತರ ಉಳಿದ ಹಣವನ್ನು ಪಡೆಯಬೇಕು ಎಂಬ ಉದ್ದೇಶದಿಂದ ಆರೋಪಿತರಾದ ನೀವು ಚಾಸಾ-12 ವಕೀಲರ ಮೂಲಕ, ಚಾಸಾ-11 ರವರಿಗೆ ಲೀಗಲ್ ವರದಿ ಪೂರೈಸುವ ಕುರಿತು ಮುಧೋಳ ಶಹರಕ್ಕೆ ಕಳುಹಿಸಿದ್ದು, ನಂತರ ದಿಃ01.05.2013 ರಂದು ಚಾಸಾ-11 ರವರು ಪಿರ್ಯಾದಿಯವರ ಸ್ಥಳಗಳನ್ನು ಪರಿಶೀಲನೆ ಮಾಡಿ ದಿಃ08.05.2013 ರಂದು ಚಾಸಾ-11 ರವರು ನಿಮಗೆ ಲೀಗಲ್ ವರದಿ ನೀಡಿರುತ್ತಾರೆ.

ನಂತರ ಪಿರ್ಯಾದಿಯವರಿಗೆ ನಿಮ್ಮ ಮೇಲೆ ನಂಬಿಕೆ ಬಂದು ದಿಃ10.05.2013 ರಂದು 1 ಲಕ್ಷ 25 ಸಾವಿರ, ದಿಃ10.05.2013 ರಂದು 2 ಲಕ್ಷ 75 ಸಾವಿರ, ದಿಃ11.05.2013 ರಂದು 5 ಲಕ್ಷ ರುಪಾಯಿ, ದಿಃ14.05.2013 ರಂದು 5 ಲಕ್ಷಗಳನ್ನು ಹೀಗೆ ಒಟ್ಟು 16 ಲಕ್ಷ 70 ಸಾವಿರ ಹಣವನ್ನು 2 ನೇ ಆರೋಪಿತರವರ ಖಾತೆಗೆ ಜಮಾ ಮಾಡಿದ್ದು, ಪಿರ್ಯಾದಿಯವರ ತಂದೆಯಾದ ಚಾಸಾ-4 ರವರು ತಮ್ಮ ಕಾರ್ಪೊರೇಶನ ಬ್ಯಾಂಕಿನ ಖಾತೆಯಿಂದ ದಿಃ15.05.2023 ರಂದು 3 ಲಕ್ಷ 50 ಸಾವಿರ ಹಣ ಹಾಗೂ ಅದೇ ದಿನ 50 ಸಾವಿರ ಹೀಗೆ ಒಟ್ಟು 3 ಲಕ್ಷ ಹಣವನ್ನು ಜಮಾ ಮಾಡಿದ್ದು, ಖಾತೆ ನಂ.9202000100003101 ಯಿಂದ 1 ಮತ್ತು 2 ನೇ ಆರೋಪಿತರಾದ ನೀವು ಸದರಿ ಹಣವನ್ನು ವಿತಡ್ರಾವಲ್ ಮಾಡಿಕೊಂಡು ಹಂಚಿಕೊಂಡು ಸಾಲ ಕೊಡಿಸದೇ ಪಿರ್ಯಾದಿಗೆ ವಂಚನೆ ಮಾಡುವ ಉದ್ದೇಶ ಹೊಂದಿ ಆ ಮೂಲಕ ಭಾ.ದಂ.ಸಂ.ಕಲಂ.420 ಸಹವಾಚಕ ಕಲಂ.34 ರ ರೀತಿಯ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಸ್ಥಳ ಃ ಮುಧೋಳ
ದಿನಾಂಕಃ 30-12-2025

ಓ ಹೇ ಕೇ ಸರಿ ಇದೆ.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಮುಧೋಳ.

**<u>ಹೆಚ್ಚುವರಿ  ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ</u>**

**<u>ಸಿಸಿ ನಂ.171/2021</u>**

1) ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು ಮುಧೋಳ ಪೊಲೀಸ ಠಾಣೆ ...ಪಿರ್ಯಾದಿ

**- ವಿರುದ್ಧ -**

ಆ.1) ವಿಶ್ವನಾಥ ತಂ.ಚಂದ್ರಶೇಖರ ನಾಯರ್
....ಆರೋಪಿ

**<u>- ಃ ಆಪಾದನೆ ಃ -</u>**

ಪ್ರಶ್ನೆ ಃ- 1)- ಈಗ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ತಿಳಿಯಿತೇ?

ಉತ್ತರಃ- ಆ.- ತಿಳಿದಿದೆ.

ಪ್ರಶ್ನೆ ಃ- 2) - ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ- ಆ.- ಇಲ್ಲ. ವಿಚಾರಣೆಯಾಬೇಕು.

ಸ್ಥಳ ಃ ಮುಧೋಳ
ದಿನಾಂಕಃ 30-12-2025 ಓ ಹೇ ಕೇ ಸರಿ ಇದೆ.

ಸಹಿ/-
ಹೆಚ್ಚುವರಿ  ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಮುಧೋಳ.